ಶ್ರೀ ಜಿ. ಮಾದೇಗೌಡ.—ಪ್ಯಾಕೇಜ್ ಕಾರ್ಯಕ್ರಮ ಮಂಡ್ಯ ಜಿಲ್ಲೆ ಪೂರ್ತಿ ಕವರ್ ಆಗುತ್ತದೆಯೆಂದು ಅಪ್ಪಣ್ ಕೊಡಿಸಿದಿರಿ. ಎಷ್ಟು ವರ್ಷಗಳೊಳಗೆ ಈ ಜಿಲ್ಲೆ ಪೂರ್ತಿ ಕವರ್ ಆಗುತ್ತದೆ? ಯಾವ ಯಾವ ವರ್ಷ ಯಾವ ಯಾವ ತಾಲ್ಲೂಕು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೀರಿ?

ಶ್ರೀ ಜಿ. ನಾರಾಯಣಗೌಡ.—ಪ್ಲಾನ್ ಪೀರಿಯಡ್‌ನೊಳಗೆ ಪೂರ್ತಿ ಜಿಲ್ಲೆ ಕವರ್ ಆಗುತ್ತದೆ. ಒಂದು ತಾಲ್ಲೂಕಿಗೆ ಪ್ರತಿ ವರ್ಷ 30 ಭಾಗದಷ್ಟು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಮಾದೇಗೌಡ.—ಪ್ರತಿ ವರ್ಷವೂ ಒಂದೊಂದು ತಾಲ್ಲೂಕಿನಲ್ಲಿ ಮೂವತ್ತು ಭಾಗದಷ್ಟು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಈ ವರ್ಷವೇ ಪೂರ್ತಿ ಜಿಲ್ಲೆಯನ್ನು ತೆಗೆದುಕೊಳ್ಳುವುದಕ್ಕೆ ಇರತಕ್ಕ ಎದರು ತೊಡರುಗಳೇನು?

ಶ್ರೀ ಜಿ. ನಾರಾಯಣಗೌಡ.—ನಾನು ಈಗಾಗಲೇ ಹೇಳಿದ ಹಾಗೆ ಒಂದು ತಾಲ್ಲೂಕಿನೊಳಗೆ ನೂರಕೆ ಮೂವತ್ತು ಭಾಗದಷ್ಟನ್ನು ಪ್ರತಿ ವರ್ಷವೂ ತೆಗೆದು ಕೊಂಡು ಮಾಡುವವರಾಗಿದ್ದೇವೆ. ಪ್ಲಾನ್ ಪೀರಿಯಡ್‌ನಲ್ಲಿ 5 ವರ್ಷಗಳೊಳಗೆ ಎಲ್ಲವೂ ಪೂರ್ತಿ ಆಗುತ್ತದೆ.

Sri K. S. SURYANARAYANA RAO.—Supplementary to (*b*) Composite Demonstration Plots for Paddy and Ragi have been selected and nurseries laid ಎಂದು ಹೇಳಿದ್ದಾರೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮಾಡಿದ್ದೀರಿ?

ಶ್ರೀ ಜಿ. ನಾರಾಯಣಗೌಡ.—ಯಾವ ಯಾವ ತಾಲ್ಲೂಕಿನಲ್ಲಿ ಮಾಡಿದೆ ಎಂಬುದನ್ನು ಹೇಳುವುದಕ್ಕೆ ಆ ಇ ಫರ್‌ಮೇಷನ್ ಈಗ ನನ್ನಲ್ಲಿ ಇಲ್ಲ. ಒಟ್ಟಿನಲ್ಲಿ 700 ಪ್ಲಾಟುಗಳನ್ನು ನಾವು ತಯಾರುಮಾಡಿ ಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಯೋಜನೆಗೋಸ್ಕರ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದೀರಿ. ಆ 5 ಕೋಟಿ ರೂಪಾಯಿಗಳಲ್ಲಿ ಸಬ್ಸಿಡಿ ಕೊಡುವುದು ಎಷ್ಟು, ಲೋನ್ ಮೂಲಕ ಕೊಡುವುದು ಎಷ್ಟು, ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ವಾಗಿ ಖರ್ಚುಮಾಡುವುದೆಷ್ಟು?

ಶ್ರೀ ಜಿ. ನಾರಾಯಣಗೌಡ.—ಇದರಲ್ಲಿ ನಮ್ಮ ಸರ್ಕಾರದವರು ಖರ್ಚು ಮಾಡುವುದು ೨೨.೨೫ ಲಕ್ಷ ರೂಪಾಯಿಗಳು.

ಶ್ರೀ ಬಿ. ಹುಚ್ಚೇಗೌಡ.—ಇದರಲ್ಲಿ ರೈತರಿಗೆ ಸಾಲದ ರೂಪವಾಗಿ ಎಷ್ಟು ಕೊಡುತ್ತೀರಿ, ಫ್ರೀಯಾಗಿ ಎಷ್ಟು ಕೊಡುತ್ತೀರಿ? ಆ ಯೋಜನೆಗಾಗಿ ಸರ್ಕಾರದವರು ಖರ್ಚುಮಾಡತಕ್ಕ 5 ಕೋಟಿ ರೂಪಾಯಿಗಳಲ್ಲಿ ರೈತರು ವಾಪಸ್ಸು ಮಾಡುವುದೆಷ್ಟು?

ಶ್ರೀ ಜಿ. ನಾರಾಯಣಗೌಡ.—ಸಾಲ ಕೊಟ್ಟಿದ್ದನ್ನು ವಾಪಸ್ಸು ಮಾಡುತ್ತಾರೆ.

Sri M. C. BASAPPA.—I want a clarification My doubt is how much subsidy, how much returnable loan is spent over Package Scheme?

ಶ್ರೀ ಜಿ. ನಾರಾಯಣಗೌಡ.—ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ೫೩.೮ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡುವವರಾಗಿದ್ದೇವೆ. ಇದರಲ್ಲಿ ೫೫.೬ ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಕೊಡುತ್ತಾರೆ. ೧೪.೨ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಪ್ಯಾಕೇಜ್ ಕಾರ್ಯಕ್ರಮಕ್ಕಾಗಿ 5 ಕೋಟಿ ರೂಪಾಯಿಗಳನ್ನು ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡ ಬೇಕೆಂದು ಹೇಳುತ್ತಿದ್ದೀರಿ. ಇಷ್ಟು ದಿವಸಗಳವರೆಗೆ ಕೇವಲ ಎಂಟು ಲಕ್ಷ ಚಿಲ್ಲರೆ ಮಾತ್ರ ಖರ್ಚು ಮಾಡಿದ್ದೀರಿ. ಈ ಕಾರ್ಯಕ್ರಮ ತೃತೀಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಮುಗಿಯುತ್ತದೋ?

ಶ್ರೀ ಜಿ. ನಾರಾಯಣಗೌಡ.—ಆ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೇನೆ. ಆ ಯೋಜನೆಯ ಅವಧಿಯೊಳಗೇ ಒಟ್ಟು ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಒಂದು ಯೋಜನೆಯನ್ನು ಇಟ್ಟು ಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಐದು ಕೋಟಿ ರೂಪಾಯಿಗಳ ಪೈಕಿ ರೈತರಿಗೆ ಸಾಲವಾಗಿ ಮತ್ತು ಸಬ್ಸಿಡಿರೂಪವಾಗಿ ಎಷ್ಟು ಹಣವನ್ನು ಕೊಡುತ್ತೀರಿ?

ಶ್ರೀ ಜಿ. ನಾರಾಯಣಗೌಡ.—ನಮಗೆ ಈ ಕಾರ್ಯದ ಸ್ಯಾಫಿಗೋಸ್ಕರವಾಗಿ ಕೇಂದ್ರಸರ್ಕಾರದಿಂದ ಸಬ್ಸಿಡಿ ರೂಪವಾಗಿ ಬರುವುದು ಶೇಕಡ 75 ಭಾಗ, ಆದರೆ ರೈತರಿಗೆ ಸಾಲದ ರೂಪವಾಗಿ ಕೊಡುವ ಭಾಗ ಎಷ್ಟೆಂಬುದನ್ನು ಹೇಳುವುದಕ್ಕೆ ಈಗ ನನ್ನಲ್ಲಿ ಆ ಮಾಹಿತಿ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಪ್ಯಾಕೇಜ್ ಕಾರ್ಯಕ್ರಮವನ್ನು ಕೇವಲ ಮಂಡ್ಯಾ ಒಂದು ಜಿಲ್ಲೆಯಲ್ಲಿ ಮುಗಿಸುವುದಕ್ಕೆ ಐದು ವರ್ಷಗಳ ಅವಧಿ ಬೇಕು ಎಂದು ಹೇಳಿದ ಮೇಲೆ ಆ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲೂ, ಅಂದರೆ ಇಡೀ ಸಂಸ್ಥಾನಕ್ಕೆ ಅನ್ವಯಿಸುವುದಾದರೆ ಇನ್ನೆಷ್ಟು ವರ್ಷಗಳು ಬೇಕಾಗುತ್ತದೆ?

Mr. SPEAKER.—I disallow this question.

ಶ್ರೀ ಜೆ. ದೇವಯ್ಯ.—ಈ ಪ್ಯಾಕೇಜ್‌ಡೀಲ್ ಕಾರ್ಯಕ್ರಮಕ್ಕಾಗಿ ಸರ್ಕಾರದಲ್ಲಿ ಈಗ ಎಷ್ಟು ಬುಲ್ ಡೋಜರ್ಸ್‌ಗಳು ಮತ್ತು ಟ್ರಾಕ್ಟರುಗಳು ಇವೆ?

ಶ್ರೀ ಜಿ. ನಾರಾಯಣಗೌಡ.—ನನ್ನಲ್ಲಿ ಈಗ ಆ ಮಾಹಿತಿ ಇಲ್ಲ.

Graduates working as Second Division Clerks in the State.

Q.*—482. **Sri G. MADE GOWDA (Malavalli).—

Will the Government be pleased to state:—

(*a*) the number of Officials working as Second Division Clerks even after passing the degree examinations in the State;

(*b*) will the Government consider such cases to promote them to First Division Clerks?

A.—Sri S. NIJALINGAPPA (Chief Minister).—

(*a*) Information is not readily available.

(*b*) Promotion to First Division of graduate Second Division Clerks will be made as per rules. All graduate II Division Clerks cannot automatically be promoted to I Division ignoring seniority and merit.

ಶ್ರೀ ಜಿ. ಮಾದೇಗೌಡ.—ನನ್ನ ಮೊದಲನೇ ಪ್ರಶ್ನೆಗೆ "Information is not readily available" ಎಂದು ಉತ್ತರ ಕೊಟ್ಟಿದ್ದಾರೆ. ದೇಶದಲ್ಲಿ ಪದವೀಧರರಾಗದೇ ಇರತಕ್ಕವರು ಕೆಲಸಕ್ಕೆ ಸೇರಿದ ಮೇಲೆ ಪದವೀಧರರಾಗಿರುವವರ ಸಂಖ್ಯೆ ಎಷ್ಟು ಎಂಬುದನ್ನು ಪರಿಶೀಲನೆ ಮಾಡಿ ಅವರೆಲ್ಲರಿಗೂ ಪ್ರೊಮೋಷನ್ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಂತಹವರು ಎಷ್ಟು ಜನ ಇದ್ದಾರೆಂಬುದು ಸರ್ಕಾರಕ್ಕೆ ಸದ್ಯಕ್ಕೆ ಗೊತ್ತಾಗುವುದಿಲ್ಲ. ಅದು ಬಹಳ ಉದ್ದವಾದ ಪಟ್ಟಿಯಾಗಬಹುದು. ಯಾರ್ಯಾರು ಸೆಕೆಂಡ್ ಡಿವಿಷನ್ ಗುಮಾಸ್ತರಾಗಿದ್ದು ಗ್ರಾಜುಯೇಟ್ಸ್ ಆಗಿದ್ದಾರೋ ಅಂತಹವರಿಗೆ ಸೀನಿಯಾರಿಟಿ, ಅರ್ಹತೆಗಳ ಮೇಲೆ 2-3-4 ಇಂಕ್ರಿಮೆಂಟ್‌ಗಳನ್ನು ಕೊಡುವ ಹಾಗೆ ಒಂದು ಆರ್ಡರ್ ಆಗಿದೆ.

ಶ್ರೀ ಜಿ. ಮಾದೇಗೌಡ.—ಪದವೀಧರರಾಗುವುದಕ್ಕೆ ಮುಂಚೆ ಕೆಲಸಕ್ಕೆ ಸೇರಿಕೊಂಡು ನಂತರ ಪದವೀಧರರಾಗಿರುವವರಿಗೆ ಇಂಕ್ರಿಮೆಂಟ್‌ಗಳನ್ನು ಕೊಡದೆ ಅಥವಾ ಪ್ರೊಮೋಷನ್ ಇತ್ಯಾದಿಗಳನ್ನು ಕೊಡದೆ ಬೇರೆಯವರಿಗೆ ಪ್ರೊಮೋಷನ್ ಕೊಟ್ಟಿರುವ ಪ್ರಸಂಗಗಳು ಅನೇಕವಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥಾದ್ದೇನೂ ನನ್ನ ಗಮನಕ್ಕೆ ಬಂದಿಲ್ಲ.

Construction of Houses for Scheduled Caste families in Holenarasipur Taluk.

**Q.*—100. Sri H. D. DEVEGOWDA (Holenarasipur).—

Will the Government be pleased to state :—

(*a*) the number of Scheduled Caste families in Holenarasipur Taluk without houses ;

(*b*) the action taken by them in this regard ;

(*c*) whether they will take early steps to allot the balance of the grant to some of the families belonging to Scheduled Castes who have received only a portion of it for the construction of houses ?

A.—Smt. YASHODARA DASAPPA (Minister for Social Welfare).—

(*a*) 328.

(*b*) Within the allotted funds for the scheme of constructing houses for the welfare of Scheduled Castes during the I and II Five Year Plans grants have been sanctioned for constructing 667 houses in the Holenarasipur Taluk. There are still 328 S.C. families without houses in the Taluk.

(*c*) There are 135 such families and a sum of Rs. 25,142 is required to complete them. The question of providing funds is engaging the attention of Government.

ಶ್ರೀ ಎಚ್. ಡಿ. ದೇವೇಗೌಡ.—328 ಅನುಸೂಚಿತ ಜಾತಿಗಳ ಸಂಸಾರಗಳು ಮನೆಗಳಿಲ್ಲದೆ ಇವೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ಆ ಮಾತನ್ನು ಯಾವ ಆಧಾರದ ಮೇಲೆ ಹೇಳುತ್ತೀರಿ ?

†ಶ್ರೀಮತಿ ಯಶೋಧರ ದಾಸಪ್ಪ.—667 ಮನೆಗಳನ್ನು ಕಟ್ಟಬೇಕೆಂದು ಗ್ರಾಂಟು ಕೊಟ್ಟಿದ್ದರಲ್ಲಿ ಮನೆಗಳನ್ನ ಕಟ್ಟದೇ ಬಾಕಿ ಉಳಿದುದು 328 ಎಂದು ಹೇಳಿದೆ.

ಶ್ರೀ ಎಂ. . ಬಸಪ್ಪ.—ಈ ವರ್ಷವಾದರೂ ಮನೆಗಳನ್ನು ಕಟ್ಟುವುದಕ್ಕೆ ಬೇಕಾದ ಗ್ರಾಂಟನ್ನು ತಾಲ್ಲೂಕ್‌ಗಳಿಗೆ ಕಮ್ಯೂನಿಕೇಟ್ ಮಾಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಮನೆ ಕಟ್ಟಲಿಕ್ಕೆ ಬೇಕಾದ ಗ್ರಾಂಟನ್ನು ಹೊಸದಾಗಿ ಕೊಡುತ್ತಿದ್ದೇವೆ. ಅದನ್ನು ಜಿಲ್ಲಾ ಡೆಪ್ಯುಟಿ ಕಮಿಷನರಿಗೆ ಕಳುಹಿಸಿ ಕೊಡುತ್ತೇವೆ. ಅವರು ಆ ತಾಲ್ಲೂಕಿಗೆ ಯಾವ ರೀತಿ ಆ ಗ್ರಾಂಟನ್ನು ಕೊಡಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ.

Sri J. P. SARVESH.—I want to know where these 328 families are living. It is said that they are without houses. Are they living in houses or in open areas ?

ಶ್ರೀಮತಿ ಯಶೋಧರ ದಾಸಪ್ಪ.—ಹೊಳೇನರಸೀಪುರದ ಕೆಲವು ಕುಟುಂಬದವರು ನಬ್ಬಿಡಿ ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿಹಾಕಿಕೊಂಡರು. ಸ್ವಲ್ಪ ಭಾಗವನ್ನು ಈಗಾಗಲೇ ಕೊಟ್ಟಿದೆ. ಉಳಿದ ಭಾಗವನ್ನು ಕೊಡುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಈಗ ಮನೆಗಳನ್ನು ಕಟ್ಟದೇ ಇರುವುದು ಇನ್ನೂ 328 ಕುಟುಂಬಗಳವರು.

ಶ್ರೀ ಕೆ. ಲಕ್ಕಪ್ಪ.—ಈಗ ಅನುಸೂಚಿತ ಜಾತಿಗಳ ಕುಟುಂಬದವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಬೈಲಾ ತಯಾರಾಗಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಹೊಸದಾಗಿ ಅನೂಸೂಚಿತ ಜಾತಿಗಳ ಕುಟುಂಬದವರು ಮನೆಗಳನ್ನು ಕಟ್ಟಿಸಿ ಕೊಡಬೇಕು ಎಂದು ಹೇಳುವ ಕಡೆ ಅಲ್ಲರತಕ್ಕ ಸೊಸೈಟಿಗಳನ್ನು ಮೊದಲು ರಿಜಿಸ್ಟರ್ ಮಾಡಿಸಬೇಕು. ಆ ರೀತಿ ಮಾಡಿದ ಮೇಲೆ ಸರ್ಕಾರದವರು ಹಣವನ್ನು ಅವರಿಗೆ ಒದಗಿಸಿ ಕೊಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಅವರು ಸೊಸೈಟಿಗಳನ್ನು ರಚನೆ ಮಾಡುವುದಕ್ಕಾದರೂ ಬೈಲಾಗಳನ್ನು ತಯ ಮಾಡಿದ್ದೀರಾ ?